ಬಿ.ಕೆ. ಹುಬ್ಬಿ



# ಕನ್ನಡದ ಕಸುವು

**‘ನ**ಮ್ಮ ಕಾಲ ಮುಗೀತು’ ಎಂದು ಹಿರಿಯರು ಆಗಾಗ ಹೇಳುತ್ತಿರುತ್ತಾರೆ. ಕಿರಿಯರ ಹೆಗಲಿಗೆ ಜವಾಬ್ದಾರಿ ವರ್ಗಾಯಿಸುವ ಅರ್ಥದ ಈ ಮಾತು ಬೇರೆ ಸಂದರ್ಭಗಳಲ್ಲಿ ಔಪಚಾರಿಕ ಆಗಬಹುದಾದರೂ ಕನ್ನಡ ಸಂದರ್ಭದಲ್ಲದು ಹೆಚ್ಚು ಅರ್ಥಪೂರ್ಣ. ಕನ್ನಡದ ನಾಳೆಗಳು ತರುಣಪೀಳಿಗೆಯ ಮೇಲೆ, ಮುಖ್ಯವಾಗಿ ಎಳೆಯರ ನಾಳೆಗಳ ಮೇಲೆ ಅವಲಂಬಿತವಾದುದು. ಪ್ರಸ್ತುತ ಕನ್ನಡ ನುಡಿ ಭಾವುಕತೆಯ ಪ್ರಶ್ನೆಯಾಗಿ ಉಳಿದಿಲ್ಲ. ಅದು ನಮ್ಮ ಕ್ರಿಯಾಶೀಲತೆಯ, ಅನ್ನದ ಹಾಗೂ ಸಾಧನೆಯ ಪ್ರಶ್ನೆಯಾಗಿ ಬದಲಾಗಿದೆ. ಈ ಹಿನ್ನೆಲೆಯಲ್ಲಿಯೇ ಕನ್ನಡದ ಬಂಡಿ ಸಾಗಬೇಕಿದೆ. ಹಾದಿ ಸುಲಭವಾದುದಲ್ಲ. ಅನೇಕ ದೇಸಿ ಭಾಷೆಗಳು ತುರ್ತು ನಿಗಾ ಘಟಕದಲ್ಲಿರುವ ಆಧುನಿಕ ಸಂದರ್ಭದಲ್ಲಿ ‘ಕನ್ನಡದ ಬಂಡಿ’ ಇನ್ನಷ್ಟು ಕಸುವು ಕೂಡಿಸಿಕೊಳ್ಳಬೇಕಿದೆ. ಬಂಡಿಯೊಂದಿಗೆ ಪಯಣ ನಡೆಸಬೇಕಾದ ಎಳೆಯರ ಕೈಗಳು ಕೂಡ ಭಾಷೆಯ ಮೂಲಕ ಗಟ್ಟಿಗೊಳ್ಳಬೇಕಾಗಿದೆ.

ತಂತಮ್ಮ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಸಾಧಕರ ಕಥನಗಳು ‘ಮಯೂರ’ದ ಈ ಕನ್ನಡ ಸಂಚಿಕೆಯಲ್ಲಿವೆ. ಕನ್ನಡದ ಮೂಲಕವೇ ಸ್ಪರ್ಧಾತ್ಮಕ ಜಗತ್ತಿನ ಮೇರುಗಳನ್ನು ಮುಟ್ಟಲಿಕ್ಕೆ ಸಾಧ್ಯವಿದೆ ಎನ್ನುವುದಕ್ಕೆ ಉದಾಹರಣೆಯಂತಿರುವ ಈ ಅನುಭವ ಕಥನಗಳು ಎಳೆಯರಿಗೆ ಸ್ಫೂರ್ತಿ ನೀಡುವಂತಿವೆ, ಕನ್ನಡದ ಬಗ್ಗೆ ಪ್ರೀತಿ ಮೂಡಿಸುವಂತಿವೆ.

ವಿವಿಧ ಆಸಕ್ತಿಗಳ, ನಿರಂತರ ಓದಿನ, ಕುಂದದ ಕಾವ್ಯಶ್ರದ್ಧೆಯ ಕೆ.ವಿ.ತಿರುಮಲೇಶರು ಕನ್ನಡದ ಸಹೃದಯರಲ್ಲಿ ಹೆಮ್ಮೆ ಮೂಡಿಸಬಲ್ಲ ಕವಿ. ಅವರ ಕವಿತೆಗಳ ಗುಚ್ಛ ‘ಕನ್ನಡ ಮಾಸ’ದ ಸಂಚಿಕೆಯ ಇನ್ನೊಂದು ವಿಶೇಷ. ಅವರ ಕುಂಚದಿಂದ ಮೂಡಿದ ಕೆಲವು ಚಿತ್ರಗಳೂ ಸಂಚಿಕೆಯಲ್ಲಿವೆ.

**–ಸಂಪಾದಕ**